S C.R.P.67

Form No.4
(Criminal)
Deposition
Sheets
(R.P.No.57)

# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

# ಸ್ಪೆಷಲ್ ಕೇಸ್ ನಂಬರ್‌ಃ 167/2020

ಚಾ.ಸಾ.–05 ಪ್ರಾ.ಸಾ.–10

| | |
|---|---|
| ಸಾಕ್ಷಿದಾರರ ಹೆಸರು | ಜಯಶೀಲ |
| ತಂದೆಯ ಹೆಸರು | ಲಿಂಗಶೆಟ್ಟಿ |
| ವಯಸ್ಸು | 62 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಬೆಳಕವಾಡಿ ಗ್ರಾಮ, |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಈಗ ನನಗೆ ತೋರಿಸುತ್ತಿರುವ ದಿಃ 6.9.2019 ರ ಸ್ವಾಧೀನತ ಮಹಜರಲ್ಲಿ ಇರುವ ಸಹಿ ನನ್ನದು. ಅದನ್ನು ನಿಪಿ 11 ಎಂದು , ಸಾಕ್ಷಿ ಸಹಿಯನ್ನು ನಿಪಿ 11ಎ ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರಗಳಲ್ಲಿ ನಾನು ಕಂಡುಬರುತ್ತೇನೆ. ಅವುಗಳು ಈಗಾಗಲೆ ನಿಪಿ 4 ಆಗಿರುತ್ತದೆ. ಸದರಿ ಭಾವಚಿತ್ರಗಳಲ್ಲಿ ನಾನು ಕಂಡುಬರುತ್ತೇನೆ. ಬೆಳಕವಾಡಿಯಿಂದ ಸ್ವಲ್ಪ ಮುಂದೆ ಆಲದ ಮರದ ಬಳಿ ಸದರಿ ಸಹಿ ಮಾಡಿದ್ದೇನೆ. ಪೊಲೀಸರು ಆಟೋವನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರಲ್ಲಿ ಒಬ್ಬ ಆರೋಪಿ ಸದರಿ ಭಾವಚಿತ್ರದಲ್ಲಿ ಕಂಡುಬರುತ್ತಾನೆ. ಆಗ ಸಹಿ ಮಾಡಲು ಕೇಳಿಕೊಂಡಿದ್ದಾರೆ ಆಗ ನಾನು ಸಹಿ ಮಾಡಿದ್ದೇನೆ. ನಾನು ದಾರಿಯಲ್ಲಿ ಹೋಗುವಾಗ ನನ್ನನ್ನು ಅಡ್ಡಹಾಕಿ ಸಹಿ ಪಡೆದುಕೊಂಡಿದ್ದಾರೆ. ನ್ಯಾಯಾಲಯದ ಮುಂದಿರುವ ಎಂಒ 1 ದೊಣ್ಣೆಯನ್ನು ಈ

ಮೊದಲು ನಾನು ನೋಡಿಲ್ಲ. ಅದನ್ನು ಯಾರು ಕೊಟ್ಟರು ಗೊತ್ತಿಲ್ಲ. ನಿಪಿ 11ರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ಭಾವಚಿತ್ರದಲ್ಲಿ ಕಾಣಿಸುವ ಆಟೋರಿಕ್ಷವನ್ನು ಪೊಲಿಸರು ಆ ದಿನ ವಶಪಡಿಸಿಕೊಂಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2) ಗಲಾಟೆಯು ದಿಃ6.9.2019 ರಂದು ಪೊಲೀಸರು ನನ್ನನ್ನು ಮಳವಳ್ಳಿ ಪೊಲಿಸ್ ಉಪಧೀಕ್ಷಕರ ಕಛೇರಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ 1 ಸುನಿಲ್ ಅಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿ ತನ್ನ ಜೊತೆ ಬಂದರೆ ಆಟೊ ಜಾಗ ಮತ್ತು ಮುಮಾ 1ರ ಜಾಗ ತೋರಿಸುವುದಾಗಿ ಹೇಳಿದರು ಎಂದರೆ ಸರಿಯಲ್ಲ. ಆ ಪ್ರಕಾರ ಪೊಲಿಸ್ ಠಾಣೆಯಿಂದ ಪೊಲಿಸ್ ಜೀಪಿನಲ್ಲಿ ಆರೋಪಿ ನಮ್ಮನ್ನು ವಾಸವಳ್ಳಿಯ ಆಲದಮರದ ಬಳಿ ಆರೋಪಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆರೋಪಿ ಜೀಪು ನಿಲ್ಲಿಸಲು ಹೇಳಿದರು ಎಂದರೆ ಸರಿಯಲ್ಲ. ಆರೋಪಿ ಅಲ್ಲಿ ನಿಲ್ಲಿಸಿದ ಆಟೋವನ್ನು ಪೊಲಿಸರಿಗೆ ತೋರಿಸಿದರು ಎಂದರೆ ಸರಿಯಲ್ಲ. ಅದರ ನಂ. ಕೆಎ 09 ಸಿ 8326 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರಿಗೆ ಮುಮಾ 1ನ್ನು ಆರೋಪಿ ಎತ್ತುಕೊಟ್ಟರು ಎಂದರೆ ಸರಿಯಲ್ಲ. ಅದನ್ನು ಆರೋಪಿತರು ಕೃತ್ಯಕ್ಕೆ ಬಳಸಿದ್ದರು ಎಂದು ಹೇಳಿದ್ದನು ಎಂದರೆ ಸರಿಯಲ್ಲ. ಮೇಲಿನ ಎಲ್ಲ ಅಂಶಗಳನ್ನು ನನ್ನ ಸಮಕ್ಷಮ ಪೊಲಿಸರು ನಿಪಿ 11ರಡಿಯಲ್ಲಿ ಬರೆದರು ಎಂದರೆ ಸರಿಯಲ್ಲ. ನಾನು ಮುಮಾ 1ನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನಿಪಿ 11ನ್ನು ಅಲ್ಲೆ ಓದಿ ತಿಳಿದು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

3) ಸಹಿಯನ್ನು ಹೊರತುಪಡಿಸಿ ಈ ಪ್ರಕರಣದ ಬಗ್ಗೆ ಬೇರೆ ಏನು ನನಗೆ ಮಾಹಿತಿ ಇಲ್ಲ ಎಂದರೆ ಸರಿ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ